ಪೋಲೀಸ್ ಇಲಾಖೆಯಲ್ಲಿ ಸೇವೆಯಿಂದ ತೆಗೆದುಹಾಕಿರುವುದು.

೧೭೫೮. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಪೋಲೀಸ್ ಇಲಾಖೆಯಲ್ಲಿ ೧೯೮೫–೮೬, ೧೯೮೬–೮೭ ಹಾಗೂ ೧೯೮೭–೮೮ನೇ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ದರ್ಜೆ ಸಹಾಯಕರುಗಳನ್ನು ಖಾಯಂಪೂರ್ವ ಅವಧಿಯಲ್ಲಿ ನಿಗದಿ ಮಾಡಲ್ಪಟ್ಟ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗದೇ ಇರುವ ಕಾರಣದಿಂದ ನೌಕರರನ್ನು ಸೇವೆಯಿಂದ ತೆಗೆದುಹಾಕಲಾಗಿದೆಯೇ ?

ಆ) ಹಾಗಿದ್ದಲ್ಲಿ, ಅವರುಗಳ ಸೇವಾವಧಿ ವಿವರಗಳನ್ನು ತಿಳಿಸುವುದು,

ಇ) ಅಂತಹ ನೌಕರರುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರು ಎಷ್ಟು ಮಂದಿ ಇದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ೧೯೮೫–೮೬ನೇ ಸಾಲಿನಲ್ಲಿ ಯಾವ ಪ್ರಥಮ ದ್ವಿತೀಯ ದರ್ಜೆ ಸಹಾಯಕರುಗಳನ್ನು ಸೇವೆಯಿಂದ ತೆಗೆದುಹಾಕಿಲ್ಲ.

ಆ) ೧೯೮೬–೮೭ನೇ ಸಾಲಿನಲ್ಲಿ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನೇಮಕಗೊಂಡಿದ್ದ ಶ್ರೀ ಯು. ಬಿ. ಜೋಶಿ (ಸಾಮಾನ್ಯ ವರ್ಗಕ್ಕೆ ಸೇರಿದ) ಎಂಬುವವರನ್ನು ದಿನಾಂಕ ೨೧–೧೦–೧೯೮೬ರಿಂದ ಸೇವೆಯಿಂದ ತೆಗೆದುಹಾಕಿದ್ದು ಸದರಿಯವರನ್ನು ದಿನಾಂಕ ೧–೧೦–೧೯೮೭ರಿಂದ ಪುನರ್ ನೇಮಕ ಮಾಡಲಾಗಿದೆ.

ಇ) ೧೯೮೭–೮೮ನೇ ಸಾಲಿನಲ್ಲಿ ಕೆ.ಪಿ.ಎಸ್.ಸಿ. ಮೂಲಕ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನೇಮಕಗೊಂಡಿದ್ದ ಶ್ರೀ ಆರ್. ಶಿವಮೂರ್ತಿ (ಪರಿಶಿಷ್ಟ ಜಾತಿಗೆ ಸೇರಿದ) ಎಂಬುವವರನ್ನು ದಿನಾಂಕ ೨೨–೫–೧೯೮೭ರಿಂದ ಸೇವೆಯಿಂದ ತೆಗೆದುಹಾಕಿದೆ.

ಶ್ರೀ ಬಿ. ಲಕ್ಕಪ್ಪ.—ದ್ವಿತೀಯ ದರ್ಜೆ ನೌಕರರ ಆಯ್ಕೆ ಅನುಕಂಪದ ಆಧಾರದ ಮೇಲೆ ಇರಲಿ, ಅಥವಾ ಲೋಕಸೇವಾ ಆಯೋಗದಿಂದ ಇರಲಿ, ಅಥವಾ ಸರ್ಕಾರ ನೇಮಕ ಮಾಡಿಕೊಂಡಿರುವ ರಿಕ್ರೂಟ್‌ಮೆಂಟ್ ಕಮಿಟಿಯಿಂದ ಆಗಿರಲಿ, ಅದು ಯಾವುದೇ ರೀತಿ ಆಗಿದ್ದರೂ ಕರ್ನಾಟಕ ನೌಕರರ ಸೇವಾ ನಿಯಮಾವಳಿ ೧೯೮೭, ನಿಯಮ ೬ (೧) ಪ್ರಕಾರ ೨ ವರ್ಷಗಳಲ್ಲಿ ಅವರು ಕಡ್ಡಾಯವಾಗಿ ಡಿಪಾರ್ಟ್‌ಮೆಂಟ್ ಪರೀಕ್ಷೆಯನ್ನು ಪಾಸು ಮಾಡಬೇಕೆಂದು ಇದೆ ಇದಕ್ಕೆ ಜಾತಿ ಆಧಾರವಿಲ್ಲ ಆದ್ದರಿಂದ ಡಿಪಾರ್ಟ್‌ಮೆಂಟ್ ಪರೀಕ್ಷೆಯನ್ನು ಪಾಸು ಮಾಡದೆ ಇರುವ ಎಲ್ಲರಿಗೂ ಸಂಪೂರ್ಣವಾಗಿ ಈಗ ನೀವು ಮಾಡಿರುವ ಕ್ರಮವನ್ನು ಅಪ್ಲೈ ಮಾಡುತ್ತೀರಾ ?

ಶ್ರೀ ವೀರಣ್ಣ.—ಡಿಪಾರ್ಟ್‌ಮೆಂಟಲ್ ಎಕ್ಸಾಮಿನೇಷನ್ ಪಾಸ್ ಮಾಡುವ ವಿಷಯದಲ್ಲಿ ಎಲ್ಲರಿಗೂ ಒಂದೇ ರೀತಿಯಾಗಿರಬೇಕೆಂಬ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಇದರಲ್ಲಿ ಮಾನ್ಯ ಸದಸ್ಯರ ಪ್ರಶ್ನೆಯನ್ನು ಅರ್ಥ ಮಾಡಿಕೊಂಡು ಜೋಶಿ ಎಂಬುವಶ ಬಗ್ಗೆ ಅನುಕಂಪದ ಆಧಾರದ ಮೇಲೆ ಅವರ ಕುಟುಂಬದಲ್ಲಿರುವ ತಂದೆ ತಾಯಿಗಳು ಸತ್ತುಹೋದ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ಸಹಾಯ ಮಾಡಬೇಕಾದ ಸಂದರ್ಭದಲ್ಲಿ ಮಗನಾಗಲಿ ಅಥವಾ ಮಗಳಾಗಲಿ ಆಗಬಹುದು. ಕೆಲಸ ಕೊಟ್ಟು ಒಂದು ವರ್ಷದಲ್ಲಿ ಡಿಪಾರ್ಟ್‌ಮೆಂಟಲ್ ಎಕ್ಸಾಮಿನೇಷನ್ ಪಾಸ್ ಮಾಡಿಕೊಳ್ಳಬೇಕು ಎನ್ನುವ ಟೆಕ್ನಿಕಲ್ ಗ್ರೌಂಡ್ ಇದೆ.

> This Departmental examination is only a technical ground. The purpose for which the appointment was given will be itself failed if we remove him. On this ground.

ಉದ್ದೇಶ ಸಫಲವಾಗುವುದಿಲ್ಲವೆನ್ನುವ ಭಾವನೆಯಿಂದ ಅವರು ರಿಕ್ವೆಸ್ಟ್ ಮಾಡಿದ ಮೇಲೆ ಪುನಃ ಅವರನ್ನು ಕಲಸಕ್ಕೆ ತೆಗೆದುಕೊಳ್ಳಲಾಯಿತು.

ಎರಡನೆಯದಾಗಿ ಶಿವಮೂರ್ತಿಯವರು ಅಪಾಯಿಂಟ್ ಆದ ಎರಡು ವರ್ಷಗಳಲ್ಲಿ ಎಕ್ಸಾಮಿನೇಷನ್ ಪೂರ್ಣ ಮಾಡಿಕೊಳ್ಳಬಹುದಾಗಿತ್ತು. ಆದರೆ ಅವರು ಮಾಡಿಕೊಳ್ಳಲಿಲ್ಲ. ಆದ್ದರಿಂದ ಸರ್ಕಾರ ಪುನಃ ಒಂದು ವರ್ಷ ಅವಧಿಯನ್ನು ವಿಸ್ತರಣೆ ಮಾಡಿತು. ಆ ಅವಧಿಯಲ್ಲೂ ಅವರು ಪಾಸ್ ಮಾಡಿಕೊಳ್ಳಲಿಲ್ಲ. ಪುನಃ ರಿಕ್ವೆಸ್ಟ್ ಮಾಡಿಕೊಂಡಿದ್ದರೆ ಸರ್ಕಾರ ಡಿಸ್ಪೆನ್ಷನರಿ ಪವರ್ ಮೇಲೆ ಒಂದು ವರ್ಷ ಅಥವಾ ಆರು ತಿಂಗಳು ಎಕ್ಸ್‌ಟೆಂಡ್ ಮಾಡಬಹುದಾಗಿತ್ತು. ಆದರೆ ಅವರು ಮಜಾ ಆದ ಮೇಲೆ ಅರ್ಜಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ಪುನರ್ ನೇಮಕ ಮಾಡಿಕೊಳ್ಳಲು ಕಾನೂನು ಪ್ರಕಾರ ಮೆರಿಟ್ ಮೇಲೆ ಪರಿಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಅನುಕಂಪದ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಬಗ್ಗೆ ದುಃಖವೇನೂ ಇಲ್ಲ. ಸಂತೋಷವಾಗಿದೆ. ಆದರೆ ಅಧಿಕಾರಿಗಳು ಅವರನ್ನು ಕೆಲಸದಿಂದ ತೆಗೆದುಹಾಕಿರುವುದರಿಂದ ಅವರಿಗಾಗಲಿ, ಅವರ ಕುಟುಂಬದವರಿಗಾಗಲಿ ಜೀವನದಲ್ಲಿ ತೊಂದರೆಯಾಗಿದೆ. ಅವರು ಪರಿಜನ ಅಭ್ಯರ್ಥಿಯಾಗಿದ್ದಾರೆ. ಅವರು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ ೧೯೫೭ರ ಪ್ರಕಾರ ಮೇಲ್‌ಮನವಿಯನ್ನು ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಅಧಿಕಾರಿಗಳ ವರದಿ ಬರುವುದಕ್ಕೆ ಮುಂಚಿತವಾಗಿ ಸಂಬಂಧಪಟ್ಟ, ಮೇಲಾಧಿಕಾರಿಗಳು ಪರಿಶಿಷ್ಟ ವರ್ಗದವರೆಂದು, ಜೊತೆಗೆ ಬಹಳ ಕೀಳುದೃಷ್ಟಿಯಿಂದ ಅವರನ್ನು ಕೆಲಸದಿಂದ ತೆಗೆದುಹಾಕಿದ್ದಾರೆ. ಆದ್ದರಿಂದ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಡಿಪಾರ್ಟ್‌ಮೆಂಟಲ್ ಪರೀಕ್ಷೆ ಪಾಸ್ ಮಾಡಬೇಕು ಎನ್ನುವ ಅನುಕಂಪದ ಆಧಾರದ ಮೇಲೆ ಬಂದರೂ ಕೂಡ ಪಕ್ಷಾತೀತ ಮಾಡಿದಂತಾಗುತ್ತದೆ. ಆದ್ದರಿಂದ ಶಿವಮೂರ್ತಿಯವರ ಮೇಲೆ ಅನುಕಂಪವನ್ನು ತೋರಿ, ಬಡವರಾದ ಅವರನ್ನು ನೇಮಕ ಮಾಡಿಕೊಳ್ಳುವ ವರದಿ ಬಂದಿಲ್ಲ ವರದಿಯನ್ನು ತರಿಸಿಕೊಂಡು ಆ ವ್ಯಕ್ತಿಯನ್ನು ಪುನರ್ ನೇಮಕ ಮಾಡಿಕೊಳ್ಳುವುದಕ್ಕೆ ಸರ್ಕಾರ ಮನಸ್ಸು ಮಾಡುತ್ತದೆಯೇ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರಣ್ಣ.—ಆದನ್ನು ಪರಿಶೀಲನೆ ಮಾಡುತ್ತೇನೆ.

ಆಡಳಿತ ಸೇವಾ ವಿಷಯ ಕುರಿತು.

೧೬೯೮. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನಲ್ಲಿ ಮುಖ್ಯ ಕಾರ್ಯದರ್ಶಿ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಈ ಹುದ್ದೆಯು ಎಂದಿನಿಂದ ಖಾಲಿ ಇದೆ ?

ಇ) ಇದನ್ನು ಎಷ್ಟು ದಿನಗಳಲ್ಲಿ ಭರ್ತಿ ಮಾಡಲಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನಲ್ಲಿ 'ಮುಖ್ಯ ಕಾರ್ಯದರ್ಶಿ' ಹುದ್ದೆಯು ಈಗ ಖಾಲಿ ಇರುವುದಿಲ್ಲ.

ಆ) —ಉದ್ಭವಿಸುವುದಿಲ್ಲ—

ಇ) —ಉದ್ಭವಿಸುವುದಿಲ್ಲ—

ಶ್ರೀ ಐ.ಬಿ. ಶಂಕರ್.—ಅಧ್ಯಕ್ಷರೆ,

ಅಧ್ಯಕ್ಷರು.—ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನಲ್ಲಿ ಮುಖ್ಯ ಕಾರ್ಯದರ್ಶಿಯವರ ಹುದ್ದೆ ಖಾಲಿ ಇಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ಉತ್ತರಿಸಿರುತ್ತಾರೆ. ಖಾಲಿ ಇಲ್ಲವೆಂದು ಹೇಳಿದ ಮೇಲೆ ಮುಗಿಯಿತು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾವು ಒಬ್ಬ ಮುಖ್ಯ ಕಾರ್ಯದರ್ಶಿಯವರನ್ನು ನೇಮಕ ಮಾಡಿದ್ದೆವು. ಅವರು ಅಲ್ಲಿ ಸುಮಾರು ೭ ತಿಂಗಳಾಯಿತು ಎಂದು ಕಾಣುತ್ತದೆ. ಅವರ